ಅಧ್ಯಕ್ಷರು: ಅವರು ಬರಲಿಲ್ಲ, ಲೆಟರ್ ಕೊಡಲಿಲ್ಲ. ನಿಮಗೆ ಕೇಳಲಿಕ್ಕೆ ಪತ್ರ ಏನೂ ಇಲ್ಲಿ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ: 17 ಹಳ್ಳಿಗಳಿಗೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು: ನೀವು ಆಮೇಲೆ ಕೇಳಿ ನಾನು ಅವರನ್ನು ಕರೆದಿದ್ದೇನೆ. ನೀವು ಆಮೇಲೆ ಕೇಳಿ ಪತ್ರ ಇಲ್ಲದೇ ಅದು ಹೇಗೆ ಆಗುತ್ತದೆ?

ಕಾರಂಜಾಹಿನೀರನ್ನು ತಡೆಗಟ್ಟುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 07 (473)

ಶ್ರೀ ರಾಜಶೇಖರ ಬಸವರಾಜ ಪಾಟೀಲ್

ಪ್ರಶ್ನೆ

ಅ) ಹುಮ್ನಾಬಾದ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಾರಂಜಾ ಅಣೆಕಟ್ಟಿನಿಂದ ನೀರು ಅತೀ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಣೆಯಾಗಿ ಗ್ರಾಮಗಳಾದ 1) ಡಾಕುಳಗಿ 2) ಸಿಂಧಬಂದಗಿ 3) ಅತಿವಾಳದಲ್ಲಿ ಹಿನ್ನೀರಿನಿಂದ ಮುಳುಗಿ ಗ್ರಾಮಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಹಿನ್ನೀರಿನಿಂದ ಈ 3 ಗ್ರಾಮಗಳ ಬೆಳೆಗಳು, ಮನೆಗಳು ಹಾಳಾಗಿದ್ದು ಪರಿಹಾರ ಯಾವಾಗ ನೀಡಲಾಗುವುದು; ಮತ್ತು ಎಷ್ಟು ನೀಡಲಾಗುವುದು;

ಇ)ಹಿನ್ನೀರನ್ನು ತಡೆಯಲು ಈಗಾಗಲೇ ಕಾಮಗಾರಿ ಪ್ರಾರಂಭವಾಗಿದ್ದು ಯಾವಾಗ ಪೂರ್ಣಗೊಳ್ಳುವುದು;

ಈ) 2012–13ರಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿ ಮುಳುಗಡೆ ಗ್ರಾಮಸ್ಥರಿಗೆ ಪರಿಹಾರ ಒದಗಿಸಲಾಗುವುದೆ? (ವಿವರ ಒದಗಿಸುವುದು)

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಉತ್ತರ

ಅ) ಕಾರಂಜಾ ಜಲಾಶಯದ ಎಫ್.ಆರ್.ಎಲ್ ಮಟ್ಟ 584.15 ಮೀ. ಆಗಿದ್ದು, 2008–09ನೇ ಸಾಲಿನಲ್ಲಿ ಗರಿಷ್ಟ ಮಟ್ಟ 583.15 ಮೀ. ವರೆಗೆ ನೀರನ್ನು ಸಂಗ್ರಹಿಸಲಾಗಿದ್ದು, ಹಿನ್ನೀರಿನಲ್ಲಿ ಡಾಕುಳಗಿ ಮತ್ತು ರಂಜೋಳಖೇಣಿ ಗ್ರಾಮಗಳ

ಕೆಲವು ಜಮೀನುಗಳಲ್ಲಿ ನೀರು ನುಗ್ಗಿ ಬೆಳೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ)ಎಫ್.ಆರ್.ಎಲ್ ಮಟ್ಟ 584.15 ಮೀ. ವರೆಗೆ ಜಲಾಶಯದಲ್ಲಿ ನೀರನ್ನು ಸಂಗ್ರಹಿಸಿದಾಗ ಮಾತ್ರ ಹಿನ್ನೀರಿನಲ್ಲಿ ಬರುವ ಡಾಕುಳಗಿ, ಸಿಂಧಬಂದಗಿ, ಅತಿವಾಳ ಈ ಮೂರು ಗ್ರಾಮಗಳು ಸೇರಿದಂತೆ ಒಟ್ಟು 14 ಗ್ರಾಮಗಳಲ್ಲಿ ಹೆಚ್ಚುವರಿಯಾಗಿ 973 ಎಕರೆ 37 ಗುಂಟೆ ಜಮೀನು ಮುಳುಗಡೆಯಾಗುತ್ತದೆ. ಆದರೆ ಇಲ್ಲಿಯವರೆಗೆ ಅಕ್ಟೋಬರ್–2008 ರಲ್ಲಿ ಗರಿಷ್ಟ ಮಟ್ಟ 583.15 ಮೀ.ವರೆಗೆ ಮಾತ್ರ ನೀರನ್ನು ಸಂಗ್ರಹಿಸಲಾಗಿದ್ದು, ಆಗ ಇದರಿಂದ ಹಾನಿಯಾದ ಬೆಳೆಗಳಿಗೆ ಪರಿಹಾರ ಧನವನ್ನು ಕಂದಾಯ ಇಲಾಖೆ ವತಿಯಿಂದ ಅಕ್ಟೋಬರ್–2009ರಲ್ಲಿ ವಿತರಿಸಲಾಗಿದೆ.

ಆದರೆ ಹಿನ್ನೀರಿನ ಮುಳುಗಡೆಯಲ್ಲಿ ಬರುವ ಡಾಕುಳಗಿ ಗ್ರಾಮದಲ್ಲಿ 190 ಮನೆಗಳು, ಸಿಂಧಬಂದಗಿ ಗ್ರಾಮದಲ್ಲಿ 354 ಮನೆಗಳು ಹಾಗೂ ಅತಿವಾಳ ಗ್ರಾಮದಲ್ಲಿ 78 ಮನೆಗಳಿಗೆ ಮೂಲ ಪರಿಹಾರವನ್ನು ಈ ಹಿಂದೆಯೇ ಪಾವತಿಸಲಾಗಿರುತ್ತದೆ. ಆದರೆ ಹೆಚ್ಚುವರಿಯಾಗಿ ಮನೆಗಳು ಮುಳುಗಡೆಯಾಗಿ ಹಾನಿಯಾಗಿರುವುದು ಕಂಡುಬಂದಿರುವುದಿಲ್ಲ.

ಈಗ ಭೂಸ್ವಾಧೀನ ಕಾಯ್ದೆ 28(ಎ)ರಡಿ ಹೆಚ್ಚುವರಿ ಪರಿಹಾರಕ್ಕಾಗಿ ವಕೀಲರಮೂಲಕ ಮನವಿ ಮಾಡಿಕೊಂಡಿದ್ದು, ವಿಶೇಷ ಭೂಸ್ವಾಧೀನಾಧಿ–ಕಾರಿಗಳು, ಬೀದರ್ ಇವರಿಂದ ಕಂದಾಯ ಇಲಾಖೆಯಲ್ಲಿ ಕಾನೂನು ಅಭಿಪ್ರಾಯ ಕೋರಲಾಗಿದ್ದು, ಆ ಇಲಾಖೆಯಲ್ಲಿ ಪರಿಶೀಲನೆಯಲ್ಲಿರುತ್ತದೆ.

ಇ)2008–09 ಸಾಲಿನಲ್ಲಿ ಡಾಕುಳಗಿ ಗ್ರಾಮದ ವ್ಯಾಪ್ತಿಯಲ್ಲಿ ತಡೆಗೋಡೆಯನ್ನು ನಿರ್ಮಿಸಲು ರೂ.14.40 ಲಕ್ಷಗಳ ಅಂದಾಜು ಮೊತ್ತದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಟೆಂಡರ್ ಆಧಾರದ ಮೇಲೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿತ್ತು. ಸದರಿ ಕಾಮಗಾರಿಯನ್ನು ಪ್ರಾರಂಭಿಸುವ ಸಮಯದಲ್ಲಿ ಸದರಿ ಗ್ರಾಮದ ಗ್ರಾಮಸ್ಥರು ಕಾಮಗಾರಿಯನ್ನು ನಿರ್ಮಿಸಲು ತಡೆಯೊಡ್ಡಿದ್ದ–ರಿಂದ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿರುವುದಿಲ್ಲ.

ಈ) ಗ್ರಾಮಸ್ಥರು ಕಾಮಗಾರಿಯನ್ನು ನಿರ್ಮಿಸಲು ತಡೆಯೊಡ್ಡಿದ್ದರಿಂದ, ಸದರಿ ಕಾಮಗಾರಿಯನ್ನು ಕೈ ಬಿಡಲಾಗಿದೆ.

ಕಾರಂಜಾ ಜಲಾಶಯದಲ್ಲಿ 584.15 ಮೀ ಮಟ್ಟಕ್ಕೆ ನೀರು ನಿಲ್ಲಿಸಿದಾಗ ಸುಮಾರು 973 ಎಕರೆ 37 ಗುಂಟೆ ಜಮೀನು ಹೆಚ್ಚುವರಿಯಾಗಿ ನೀರಿನಲ್ಲಿ ಮುಳುಗಡೆಯಾಗುವುದಿದ್ದು ಸದರಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಂಡು ಭೂಪರಿಹಾರ ಒದಗಿಸಲು ಮಾರ್ಚ್–2012ರ ಅಂತ್ಯಕ್ಕೆ ರೂ. 21.51 ಕೋಟಿಗಳ

ಠೇವಣಿಯನ್ನು ಜಿಲ್ಲಾಧಿಕಾರಿಗಳು, ಬೀದರ್, ಇವರಿಗೆ ನೀಡಲಾಗಿದೆ. ಈ ಪೈಕಿ 647 ಎಕರೆ 28 ಗುಂಟೆಗಳಿಗೆ ಈಗಾಗಲೇ 4(1) ಅಧಿಸೂಚನೆ ಹೊರಡಿಸಲಾಗಿದ್ದು 6(1) ರ ಅಧಿಸೂಚನೆ ಪ್ರಗತಿಯಲ್ಲಿರುತ್ತದೆ, ಇನ್ನುಳಿದ 326 ಎಕರೆ 17 ಗುಂಟೆಗಳಿಗೆ 4(1) ಅಧಿಸೂಚನೆ ಹೊರಡಿಸುವ ಹಂತದಲ್ಲಿರುತ್ತದೆ.

ಶ್ರೀ ರಾಜಶೇಖರ ಬಸವರಾಜ ಪಾಟೀಲ್:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಕಾರಂಜಾ ಪ್ರಾಜೆಕ್ಟ್‌ನಲ್ಲಿ ಹಿನ್ನೀರು ಬಂದು ಡಾಕುಳಗಿ ಸೇರಿದಂತೆ ಮೂರು ಗ್ರಾಮಗಳಲ್ಲಿ ಮನೆಗಳು ಹೋಗಿವೆ. ಅದರ ಜೊತೆಯಲ್ಲಿ ಹೊಲ ಕೂಡ ಹೋಗಿ ಲಾಸ್ ಆಗಿವೆ. ಈಗಾಗಲೇ ಹೋದ ಸದನದಲ್ಲಿಯೂ ಕೂಡ ಮಾನ್ಯ ಸಚಿವರು ಆಶ್ವಾಸನೆ ಕೊಟ್ಟಿದ್ದರು. ಹಿನ್ನೀರಿನಿಂದಾಗಿ ಅದು ಏನು ಮುಳುಗಡೆ ಆಗಿದೆ ಅದಕ್ಕೆ ಸರ್ಕಾರದಿಂದ ಏನು ಸಹಾಯ ಮಾಡಬೇಕೋ ನಾವು ಅದನ್ನು ಮಾಡುತ್ತೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ, ಇಲ್ಲಿಯವರೆಗೆ ಅಲ್ಲಿ ಏನು ಮನೆಗಳು ಮುಳುಗಿ ಹೋಗಿವೆ ಅಲ್ಲಿ ಯಾವುದೂ ಬದಲಾವಣೆಯಾಗಿಲ್ಲ. ಈಗಾಗಲೇ ಈ ಕಾರಂಜಾ ಪ್ರಾಜೆಕ್ಟ್‌ನಲ್ಲಿ ಮೊದಲನೇ ಸಲ ಮಾನ್ಯ ಸಚಿವರು 583.15 ಮೀಟರ್ ಮಟ್ಟಕ್ಕೆ ನೀರನ್ನು ನಿಲ್ಲಿಸುವ ವ್ಯವಸ್ಥೆ ಮಾಡಿದರು. ಆ ಹಿನ್ನೀರಿನಿಂದಾಗಿ ನನ್ನ ಮತಕ್ಷೇತ್ರದಲ್ಲಿ ಡಾಕುಳಗಿ ಸೇರಿದಂತೆ ಇನ್ನೂ ಎರಡು ವಿಲೇಜ್‌ಗಳಲ್ಲಿ ಸಾಕಷ್ಟು ಮನೆಗಳಿಗೆ ಹಾಗೂ ಸಾಕಷ್ಟು ಹೊಲಗಳಿಗೆ ತೊಂದರೆಯಾಗಿದೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ. ಈಗಾಗಲೇ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. ಕಾರಂಜಾ ಜಲಾಶಯದ ಎಫ್.ಆರ್.ಲೆವೆಲ್ 584.15 ಮೀ 2008–09 ರವರೆವಿಗೂ ನೀರನ್ನು ಪೂರ್ಣ ಪ್ರಮಾಣದಲ್ಲಿ ಹಿಡಿಯುವಂಥ ಸಾಧ್ಯತೆಗಳಿರಲಿಲ್ಲ. ಆದರೆ, ಆ ವರ್ಷ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶದಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬಂದಿದ್ದರಿಂದ ನಾವು ಹೆಚ್ಚಿನ ಪ್ರಮಾಣದಲ್ಲಿ ನೀರನ್ನು ಹಿಡಿಯುವಂಥ ಅವಶ್ಯಕತೆಯಿತ್ತು, ಹೀಗಾಗಿ ಆಗ ಪ್ರಥಮಬಾರಿಗೆ 583ಕ್ಕೆ ನಾವು ನಿಲ್ಲಿಸಿದ್ದೇವೆ. ಆ ಸಂದರ್ಭದಲ್ಲಿ ಹಿನ್ನೀರಿನಿಂದಾಗಿ ಡಾಕುಳಗಿ, ಸಿಂಧಬಂದಗಿ, ಅತಿವಾಳ, ರಂಜೋಳಖೇಣಿ ಗ್ರಾಮಗಳಲ್ಲಿ ಸ್ವಲ್ಪ ಮಟ್ಟಿಗೆ ಕ್ರಾಪ್ ಲಾಸ್ ಆಗಿದೆ ಎಂದಾಗ ಅಂದು ಕಂದಾಯ ಇಲಾಖೆಯವರು ಆ ಕ್ರಾಪ್ ಲಾಸ್‌ಗೆ ಹಣವನ್ನು ವಿತರಣೆ ಮಾಡಿದ್ದರು. ಇಲ್ಲಿ ಅವರ ಇನ್ನೊಂದು ಮುಖ್ಯ ಪ್ರಶ್ನೆ ಏನೆಂದರೆ, ಹಳೆಯ compensation ಕೊಡುವುದನ್ನು enhance ಮಾಡುವುದರ ಬಗ್ಗೆ ಕೇಳಿದ್ದಾರೆ. ಆ enhancement ನಲ್ಲಿ ಒಬ್ಬ ವ್ಯಕ್ತಿ ಕೋರ್ಟಿಗೆ ಹೋಗಿ enhancement

orderನ್ನು ತಂದಿದ್ದಾನೆ. ಅವರಿಗೆ enhancement ಕೊಟ್ಟಿದ್ದೇವೆ. ಉಳಿದವರಿಗೆ ಕೂಡ Land Revenue Actನ ಸೆಕ್ಷನ್ 28 (a) ಪ್ರಕಾರ ಕೊಡಿ ಎಂದು ಕೇಳಿದ್ದಾರೆ. ಅದನ್ನು ಕೊಡಬೇಕೋ ಬೇಡವೋ ಎನ್ನುವುದರ ಬಗ್ಗೆ ಇದು ಅನ್ವಯಿಸುತ್ತದೆಯೋ ಇಲ್ಲವೋ ಎನ್ನುವುದನ್ನು Special Land Acquisition Authority ಯವರು Revenue Secretary ಯವರನ್ನು ಕೇಳಿದ್ದಾರೆ. Revenue Secretaryಯವರು ಏನು ಆದೇಶ ಮಾಡುತ್ತಾರೆ ಆ ಆದೇಶದ ಮಾಡಿದ ತಕ್ಷಣ ನಾವು enhancement ಕೂಡ ಕೊಡುತ್ತೇವೆ. ಇನ್ನು additional 973 ಎಕರೆ, actually ಇದು ಆಗಿರಲಿಲ್ಲ. ನಾನು ಬಂದ ಮೇಲೆ third party inspectionಮಾಡಿ back watersಗೆ ಹೆಚ್ಚುವರಿ land acquisitionಮಾಡಬೇಕೆನ್ನುವ ತೀರ್ಮಾನ ಮಾಡಿ 973 ಎಕರೆಗೆ ನಾವು acquisition ಮಾಡಬೇಕೆಂದು 4(1), 6(1) notification ಎಲ್ಲಾ ಕೂಡ ಆಗಿದೆ. ಅದಕ್ಕೆ ರೂ.21.51 ಕೋಟಿ ಡೆಪಾಸಿಟ್ ಕೂಡ ಮಾಡಿದ್ದೇವೆ. ನಮ್ಮ ಇಲಾಖೆಯಿಂದ ನಮ್ಮ ಹಣವನ್ನು Revenue Department ಗೆ ಡೆಪಾಸಿಟ್ ಮಾಡಿದ್ದೇವೆ. ಸುಮಾರು 676 ಎಕರೆಗೆ award stage ನಲ್ಲಿದೆ. RevenueDepartment ನಿಂದ award ಬಂದ ತಕ್ಷಣ ಕೊಡುತ್ತೇವೆ. ಇನ್ನು 326 ಎಕರೆಗೆ 4 (1) notification ಆಗುತ್ತಿದೆ. ಅದೂ ಕೂಡ award ಆದ ಕೂಡಲೇ, ಅದನ್ನು ಕೊಡುತ್ತೇವೆ. Normally 50% ದುಡ್ಡು ಕಟ್ಟಬೇಕು. ಈಗಾಗಲೇ ನಾವು ಅದಕ್ಕಿಂತ ಹೆಚ್ಚಿನ ದುಡ್ಡನ್ನು Revenue Department ಗೆ ಕೊಟ್ಟಿದ್ದೇವೆ. ಆದ್ದರಿಂದ ಯಾವುದೇ ರೀತಿಯ ರೈತರಿಗೆ ತೊಂದರೆಯಾಗದಂತೆ ಯಾವುದೇ ರೀತಿಯ compensationಕೊಡುವುದನ್ನು ನಿಲ್ಲಿಸದಂತೆ ನಮ್ಮ ಇಲಾಖೆ ಕ್ರಮ ತೆಗೆದುಕೊಂಡಿದೆ.

ಶ್ರೀ ರಾಜಶೇಖರ್ ಬಸವರಾಜ ಪಾಟೀಲ್ :– ಮಾನ್ಯ ಸಚಿವರ ಈಗ ಕ್ರಾಪ್ ಲಾಸ್ ಆಗಿರುವುದರ ಬಗ್ಗೆ ಹೇಳಿದರು. ಇದರಿಂದ ಅವರಿಗೆ ಯಾವುದೂ ಸಹಾಯವಾಗಲಿಲ್ಲ.2008–09 ರಲ್ಲಿ ಏನು ನೀರು ಬಂದು ಮುಳುಗಡೆಯಾಯಿತು ಸರ್ಕಾರದಿಂದ ಏನೂ ಸಹಾಯ ಮಾಡುವುದಕ್ಕೆ ಆಗಲಿಲ್ಲ. ಈಗಾಗಲೇ ನನ್ನ ಕ್ಷೇತ್ರದಲ್ಲಿ ಕಾರಂಜಾ ಪ್ರಾಜೆಕ್ಟ್‌ನ black waterಬಂದು ಹೊಲ ಮನೆಗಳನ್ನು ಕಳೆದುಕೊಂಡು ಎಲ್ಲವನ್ನೂ ಕಳೆದುಕೊಂಡು ಬಿಟ್ಟಿದ್ದಾರೆ. ಹೀಗಾಗಿ ಅವರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಈಗಾಗಲೇ ತಾವು ಕೂಡ ಬಂದಾಗ ಬೀದರ್‌ನಲ್ಲಿ ಈ ಬಗ್ಗೆ ಚರ್ಚೆ ಮಾಡಿದ್ದೇವೆ. ತಾವು ಆದಷ್ಟು ಬೇಗನೆ

ಜಿಲ್ಲಾಧಿಕಾರಿಗಳಿಗೆ ಹೇಳಿ ಇದರ ಬಗ್ಗೆ ಸರ್ವೆ ಮಾಡಿ ಇದೆಲ್ಲಾ ನಾವು ಮಾಡುತ್ತೇವೆಂದು ಹೇಳಿದಿರಿ. ಇಲ್ಲಿಯವರೆಗೆ ಇನ್ನು ಏನೂ ಆಗಲಿಲ್ಲ. ತಾವು 973 ಎಕರೆ ಹೇಳಿದಿರಿ ಅದರಲ್ಲಿ ಸ್ವಲ್ಪ ಆಗಿದೆ. ನಾವು ಮೊನ್ನೆ ತಾನೆ ಮೀಟಿಂಗ್ ಮಾಡಿದ್ದೇವೆ. ತಮ್ಮ ಅಧಿಕಾರಿಗಳು ಚೀಫ್ ಇಂಜಿನಿಯರ್‌ಗಳು ಬೀದರ್‌ನಲ್ಲಿ ಕಾರಂಜಾದ ಬಗ್ಗೆ ಮೀಟಿಂಗ್ ಕೂಡ ಮಾಡಿದ್ದೇವೆ. ಅವರೂ ಕೂಡ ಪ್ರಸ್ತಾವದ ನಡವಳಿಕೆ ಕೊಟ್ಟಿದ್ದಾರೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಇದರಲ್ಲಿ ಭೂ ಸ್ವಾಧೀನ ಪ್ರಕ್ರಿಯೆ ಬಹಳ ವಿಳಂಬವಾಗಿ ನಡೆಯುತ್ತಿದೆ. ದುಡ್ಡು ರೂ.21 ಕೋಟಿ ಕಟ್ಟಿದ್ದರೂ ಅಲ್ಲಿ ಜಿಲ್ಲಾಧಿಕಾರಿಗಳು ಇಲ್ಲಿಯವರೆಗೆ 4(1) ಮಾಡಲಿಲ್ಲ. ಆರು ತಿಂಗಳಾಯಿತು ಹಾಗೆಯೇ ನಿಂತಿದೆ. ಕಾರಂಜಾ ಲಿಫ್ಟ್ ಇರಿಗೇಷನ್ ಟೆಂಡರ್ ಆಗಿ ಪೆಂಡಿಂಗ್ ಬಿದ್ದಿದೆ. ಅತಿವಾಳ ಲಿಫ್ಟ್ ಇರಿಗೇಷನ್ ಪೆಂಡಿಂಗ್ ಬಿದ್ದಿದೆ. ಈಗ ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿದ್ದ ಕಾರಣ ಅವರಿಗೆ ಪರಿಹಾರವೂ ಸಿಗುತ್ತಿಲ್ಲ. ಅಲ್ಲಿನ ಜನ ನಾವೇನೂ ಹೆಚ್ಚಿನ ಪರಿಹಾರ ಕೇಳುತ್ತಿದ್ದೇವೆ ಅದನ್ನು ಕೊಡಿ. ಇದು ನಾಲ್ಕು ದಶಕಗಳಿಂದ ಪೆಂಡಂಗ್ ಇದೆ. 9 ಕೋಟಿ ಯಿಂದ 600 ಕೋಟಿ ರೂಪಾಯಿ ಖರ್ಚಾದರೂ ಮುಗಿದಿಲ್ಲ. ಈ ವರ್ಷವಾದರೂ ಮಂತ್ರಿಗಳು ಮಾತು ಕೊಟ್ಟಿರುವ ಪ್ರಕಾರ ಮಾರ್ಚ್‌ನೊಳಗೆ ಮುಗಿಸಬೇಕೆಂದು ನಾವು ವಿನಂತಿ ಮಾಡುತ್ತಿದ್ದೇವೆ.

ಶ್ರೀ ಬಸವರಾಜ ಬೊಮ್ಮಯಿ : ಈಗಾಗಲೇ ನಾನು ಹೇಳಿದ ಹಾಗೆ ನಮ್ಮ ಇಲಾಖೆಯಿಂದ ಹಣವನ್ನೇನು ರೆವೆನ್ಯೂ ಇಲಾಖೆಗೆ ಕೊಡಬೇಕು, more than50% ಹಣವನ್ನು ಈಗಾಗಲೇ ಕೊಟ್ಟಿದ್ದೇವೆ. ಮತ್ತು 676 ಎಕರೆಗೆ ಈಗಾಗಲೇ 6(1) notificationಆಗಿ award stage ಗೆ ಬಂದಿದೆ. ಕೂಡಲೇ ಏನು ಇದೆ ಅದನ್ನು ಕೂಡ ಕೊಡುತ್ತೇವೆ. ಮಿಕ್ಕಿದ್ದನ್ನು ಕೂಡ ಮಾಡುವುದಕ್ಕೆ ಹೇಳುತ್ತೇನೆ. ಮತ್ತು ಅಲ್ಲಿ ಸಂಬಂಧಪಟ್ಟಂತೆ Revenue Departmentನ Secretary ಯನ್ನು ಕರೆದು ಆದಷ್ಟು ಬೇಗನೆ ಮಾಡಲಿಕ್ಕೆ ಹೇಳುತ್ತೇನೆ. ಕಾರಂಜಾ ಮತ್ತು ಅತಿವಾಳ ಲಿಫ್ಟ್ ಇರಿಗೇಷನ್ ನಿಂತಿಲ್ಲ. ಕಾರಂಜಾ ಲಿಫ್ಟ್ ಇರಿಗೇಷನ್‌ನಲ್ಲಿ ಈಗಾಗಲೇ ಪಂಪ್‌ಹೌಸ್ ಎಲ್ಲವೂ ಮುಗಿದು ಈಗಾಗಲೇ 18 ಕಿ.ಮೀ.ರವರೆಗೆ ನೀರು ಕೊಡುವುದಕ್ಕೆ ಸಿದ್ದವಾಗಿದೆ. ಅತಿವಾಳ ಪಂಪ್‌ಹೌಸ್ ಈಗಾಗಲೇಜಾಕ್‌ವೆಲ್ ಕೆಲಸ ಪ್ರಾರಂಭವಾಗಿದೆ. ಆದ್ದರಿಂದ simultaneously, ಅವರಿಗೆ compensation ಕೊಡುವುದು ಮತ್ತು ಕಾಮಗಾರಿ ಎರಡೂ ಒಟ್ಟಿಗೆ ಮಾಡುತ್ತಿದ್ದೇವೆ.